ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101
**RaithaBhavana, General Cariappa Circle, Gadag – 582 101**
**E-mail: ksrdpruadmissions@gmail.com Phone: 08372-230338, Fax: 08372-297343**

News About First Anniversary of “Yoga Kshema Yoga Kendra” of KSRDPR University is published in Kannada Daily Newspaper Date:04.07.2021

# ಯೋಗದಿಂದ ಮನಸ್ಸು ಸದೃಢ

**ಗದಗ:** ಸಕಾರಾತ್ಮಕ ಆಲೋಚನೆ, ಸರಿಯಾದ ಆಹಾರ ಕ್ರಮ, ಚೈತನ್ಯಯುತವಾದ ಯೋಗ ಜೀವನ ಶೈಲಿ ರೂಢಿಸಿಕೊಂಡರೆ ಮಾತ್ರ ಸರಿಯಾದ ಆಲೋಚನೆ, ಸದೃಢ ಮನಸ್ಸು ಹೊಂದಲು ಸಾಧ್ಯ ಎಂದು ನಟಿ ಕಾವ್ಯಾ ಶಾ ಹೇಳಿದರು.

ರಾಜ್ಯ ಗ್ರಾಮೀಣಾವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ (ಆರ್‌ಡಿಪಿಆರ್) ದೈಹಿಕ ಶಿಕ್ಷಣ ಕ್ರೀಡಾ ನಿರ್ದೇಶನಾಲಯದ ಯೋಗಕ್ಷೇಮ ಯೋಗ ಕೇಂದ್ರದ ವತಿಯಿಂದ ಶನಿವಾರ ಆಯೋಜಿಸಿದ್ದ 'ಯೋಗ ಸಾಧನೆಯ ಒಂದು ಸಾರ್ಥಕ ವರ್ಷ ಮತ್ತು ಯೋಗ ನಿರಂತರ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಗದಗ ಆರ್‌ಡಿಪಿಆರ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಯೋಗ ಕಾರ್ಯಕ್ರಮದಲ್ಲಿ ಪ್ರೀತಿ ಹಡಗಲಿ ಯೋಗಾಸನ ಪ್ರದರ್ಶಿಸಿದರು.

ವಿಶ್ವವಿದ್ಯಾಲಯ ಕುಲಪತಿ ವಿಷ್ಣುಕಾಂತ್ ಚಟಪಲ್ಲಿ ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಯೋಗ ಚಟುವಟಿಕೆಗಳ ನಿರಂತರವಾಗಿರುತ್ತವೆ. ಶೀರ್ಷಿಕೆ ಹೇಳುವಂತೆ ಇಲ್ಲಿ ಯೋಗ ಚಟುವಟಿಕೆಗಳು ನಿರಂತರವಾಗಿ ಮುಂದಿನ ದಿನಗಳಲ್ಲಿಯೂ ನಡೆಯಲಿದ್ದು, ಸ್ವಸ್ಥ ಮತ್ತು ಸಮೃದ್ಧ ಆರೋಗ್ಯಕರ ಸಮಾಜ ನಮ್ಮ ಗುರಿಯಾಗಿದೆ ಎಂದರು.

ಯೋಗ ತರಬೇತುದಾರ ಪ್ರೀತಿ ಹಡಗಲಿ ಅವರು ಯೋಗಾಸನ ಪ್ರದರ್ಶನ ಮಾಡಿದರು. ಕುಲಸಚಿವ ಬಸವರಾಜ ಲಕ್ಕಣ್ಣವರ ಸ್ವಾಗತಿಸಿದರು. ದೈಹಿಕ ಶಿಕ್ಷಣ ಮತ್ತು ಕ್ರೀಡಾ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಡಾ. ವೀರೇಶಕುಮಾರ ವಿಜಾಪುರ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ಕೃಪಾ ಪವಾರ ಪರಿಚಯಿಸಿದರು. ಡಾ. ನಾಗವೇಣಿ ನಿರೂಪಿಸಿದರು. ಡಾ. ಸಂಗನಗೌಡ ಪಾಟೀಲ ವಂದಿಸಿದರು.